**ಸಾಕ್ಷಿಯನ್ನು ದಿಃ *17/12/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : ಶ್ರೀ ಎನಎಂಬಿ ವಕೀಲರಿಂದ 2 ನೇ ಎದುರುದಾರರ ಪರವಾಗಿ.**

ಅಪಘಾತ ದಿನದಿಂದ ನಾನು ಯಲ್ಲಾಪೂರದಲ್ಲಿ ಕೆಲಸ ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದೆ. ನಾನು ಬರುವ ಮೋಟಾರುಸೈಕಲನಲ್ಲಿ ಮೂರು ಜನ ಪ್ರಯಾಣಿಸುತ್ತಿದ್ದೇವು. ಅಪಘಾತವು ಹುಬ್ಬಳ್ಳಿ ಯಲ್ಲಾಪೂರ ರಸ್ತೆಯಲ್ಲಿ ಆಗಿರುತ್ತದೆ ಎಂದರೆ ನಿಜ. ಸದರಿ ರಸ್ತೆ ವಾಹನ ದಟ್ಟಣೆ ಇರುವ ರಸ್ತೆ ಎಂದರೆ ನಿಜ. ಅಪಘಾತ ದಿನದಂದು ನಮ್ಮ ಮೋಟಾರುಸೈಕಲಗೆ ಹಿಂದಿನಿಂದ ಲಾರಿ ಬಂದು ಡಿಕ್ಕಿ ಪಡಿಸಿರುತ್ತದೆ ಎಂದು ಹೇಳಿರುವುದು ನಿಜವಿರುತ್ತದೆ. ಈ ರೀತಿ ಇದ್ದರೆ ನಮ್ಮ ಮೋಟಾರುಸೈಕಲಗೆ ಹಿಂದಿನ ಭಾಗ ಜಖಂಗೊಳ್ಳುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದು ಹೇಗೆ ಆಯಿತು ಎಂದು ನನಗೆ ಗೊತ್ತಾಗಲಿಲ್ಲ ಎಂದು ಉತ್ತರಿಸುತ್ತಾರೆ. ನಾನು ಸದರಿ ಮೋಟಾರುಸೈಕಲನ ಮಧ್ಯ ಭಾಗದಲ್ಲಿ ಕುಳಿತಿದ್ದೆ. ಫಿರ್ಯಾದಿಯಲ್ಲಿ ನಾನು ಮೋಟಾರುಸೈಕಲನ ಹಿಂಬದಿ ಭಾಗದಲ್ಲಿ ಕುಳಿತಿದ್ದೆ ಎಂದು ಬರೆಸಿದ್ದು ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಸ್ನೇಹಿತನ ತಂದೆ ಹಾಗೇ ಬರೆಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಫಿರ್ಯಾದಿಯಲ್ಲಿ ಏನೂ ಬರೆದಿದೆ ಎಂದು ಗೊತ್ತಿದೆ. ದ್ವಿಚಕ್ರ ವಾಹನದಲ್ಲಿ ಇಬ್ಬರಿಗೆ ಮಾತ್ರ ಪ್ರಯಾಣಿಸಲು ಪರವಾನಿಗೆ ಇರುತ್ತದೆ ಎಂದರೆ ನಿಜ. ಈ ರೀತಿ ಇರುವಾಗ ಮೂರು ಜನ ಪ್ರಯಾಣಿಸುತ್ತಿರುವ ಕಾರಣ ಸದರಿ ಅಪಘಾತವಾಯಿತು ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ಸದರಿ ಮೋಟಾರುಸೈಕಲ ಹಿಂಬದಿಗೆ ಯಾವುದೇ ರೀತಿ ಜಖಂಗೊಂಡಿಲ್ಲ ಎಂದು ವರದಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇದೆ.

ಅಪಘಾತ ಪಡಿಸಿದೆ ಎಂದು ಹೇಳಲಾದ ಲಾರಿ ಅಪಘಾತದಲ್ಲಿ ಭಾಗಿಯಾಗಿಲ್ಲ ಆದ್ದರಿಂದ ಸದರಿ ಲಾರಿ ಯಾವುದೇ ಭಾಗಗಳು ಜಖಂಗೊಡಿಲ್ಲ ಎಂದರೆ ಸರಿಯಲ್ಲ. ನಾವು ಮೂರು ಜನ ಪ್ರಯಾಣಿಸುತ್ತಿರುವ ಕಾರಣವೇ ಬ್ಯಾಲೆನ್ಸ ತಪ್ಪಿ ಅಪಘಾತವಾಯಿತೆ ಹೊರತು ಲಾರಿ ಚಾಲಕನ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ಕೂಡಲೇ ಯಲ್ಲಾಪೂರ ಸರಕಾರಿ ಆಸ್ಪತ್ರೆಗೆ ದಾಖಲಿಸಿ ನಂತರ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ರವಾನಿಸಿದರು. ಇದನ್ನು ಹೊರತುಪಡಿಸಿ ನಾನು ನಮ್ಮ ಯಲ್ಲಾಪೂರದ ಸತೀಶ ವೈದ್ಯರ

ಹತ್ತಿರ ಚಿಕಿತ್ಸೆ ಪಡೆಯುತ್ತಿದ್ದೆ. ಈ ರೀತಿ ಸದರಿ ವೈದ್ಯರ ಹತ್ತಿರ ಚಿಕಿತ್ಸೆ ಪಡೆದಿರುವ ಕುರಿತು ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ. ನನಗೆ ಯಾವುದೇ ರೀತಿಯ ಶಸ್ತ್ರಚಿಕಿತ್ಸೆಯಾಗಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಉಪಕರಣಗಳನ್ನು ಅಳವಡಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಅಪಘಾತವಾದ ಕೂಡಲೇ ನನಗೆ ಎಕ್ಸರೆ ಅಥವಾ ಸಿಟಿ ಸ್ಕಾನ ಮಾಡಿಲ್ಲ ಎಂದರೆ ಸರಿಯಲ್ಲ. ಈ ರೀತಿ ಮಾಡಿದ್ದಾರೆ ಎಂದು ಹೇಳಲಾದ ದಾಖಲಾತಿಗಳನ್ನು ಹಾಜರುಪಡಿಸಲು ಅಡಚಣೆವಿಲ್ಲ ಎಂದರೆ ನಿಜ. ಡಿಸಚಾರ್ಜ ಸಮರಿಯಲ್ಲಿ ಉಪಕರಣಗಳನ್ನು ಅಳವಡಿಸಿರುವ ಕುರಿತ ನಮೂದು ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಎರಡು ಬಾರಿ ಶಸ್ತ್ರಚಿಕಿತ್ಸೆ ಮಾಡಿ ಉಪಕರಣಗಳನ್ನು ಅಳವಡಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ಎರಡು ಬಾರಿ ಶಸ್ತ್ರಚಿಕಿತ್ಸೆ ಮಾಡಿರುವ ದಿನಾಂಕಗಳನ್ನು ನನಗೆ ಹೇಳಲು ಬರುವುದಿಲ್ಲ. ನನಗೆ ನೀಡಿರುವ ಚಿಕಿತ್ಸೆ ವಿವರಗಳನ್ನು ಡಿಸಚಾರ್ಜ ಸಮರಿಯಲ್ಲಿ ವಿವರವಾಗಿ ಉಲ್ಲೇಖ ಮಾಡುತ್ತಾರೆ ಎಂದರೆ ನಿಜ. ಸದರಿ ಡಿಸಚಾರ್ಜ ಸಮರಿಯಲ್ಲಿ ವಿವರಗಳನ್ನು ತಿಳಿದುಕೊಂಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದನ್ನು ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ.

ಡಿಸಚಾರ್ಜವಾದ ನಂತರ ನಾನು ಸದರಿ ಆಸ್ಪತ್ರೆಯಲ್ಲಿ ಮುಂದುವರೆದ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಈ ರೀತಿ ಮುಂದುವರೆದ ಚಿಕಿತ್ಸಯ ದಾಖಲಾತಿಗಳಲ್ಲಿ ನನ್ನ ಮೂಳೆ ಮುರಿತಗಳು ಜೋಡಣೆಯಾಗಿರುವ ಕುರಿತು ನಮೂದು ಮಾಡುತ್ತಾರೆ ಎಂದರೆ ನಿಜ. ಈ ರೀತಿ ನನ್ನ ಮೂಳೆ ಮುರಿತಗಳು ಜೋಡಣೆಯಾಗಿ ಸಂಪೂರ್ಣವಾಗಿ ಗುಣಮುಖವಾಗಿದ್ದರಿಂದ ಉದ್ದೇಶಪೂರ್ವಕವಾಗಿ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅದರಂತೆ ನಾನು ಗುಣಮುಖನಾದ ನಂತರ ಯಾವುದೇ ರೀತಿ ಮುಂದುವರೆದ ಚಿಕಿತ್ಸೆ ಮುಂದುವರೆಸಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ಕೂಡಲೇ ಪೊಲೀಸರಿಗೆ ಹೇಳಿಕೆ ನೀಡಿಲ್ಲ, ಕಾರಣ ನನಗೆ ಪ್ರಜ್ಞೆ ಇರಲಿಲ್ಲ. ನನಗೆ ಕಿಮ್ಸ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂತು. ಆಸ್ಪತ್ರೆಯ ದಾಖಲಾತಿಗಳಲ್ಲಿ ನಾನು ಅಪಘಾತದ ಹಿನ್ನೆಲೆಯಲ್ಲಿ ದಾಖಲಾದಾಗ ಪ್ರಜ್ಞೆ ಇತ್ತು ಎಂದು ಬರೆದಿದ್ದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ತಪ್ಪು ಬರೆದಿರುವ ಕುರಿತು ನಾನು ವೈದ್ಯರನ್ನು ಕೇಳಿಲ್ಲ.

ಮೂರು ದಿನಗಳ ವಿಳಂಬದ ನಂತರ ಫಿರ್ಯಾದಿಯನ್ನು ನೀಡಿದ ಕುರಿತು ಸರಿಯಾದ ಕಾರಣಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಅಪಘಾತ ಆಗಿರುವ ಕುರಿತು ಎಂಎಲಸಿ ಪ್ರಮಾಣಪತ್ರ ಹಾಜರುಪಡಿಸಲ ನನಗೆ ಅಡಚಣೆವಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದರ ಕುರಿತು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ನಾನು ಪ್ರಯಾಣಿಸುತ್ತಿರುವ ಮೋಟಾರುಸೈಕಲ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿರಲಿಲ್ಲ ಎಂದರೆ ಸರಿಯಲ್ಲ. ಅದನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಬಹುದು.

ಅಪಘಾತದ ಸಮಯದಲ್ಲಿ ನನಗೆ 22 ವರ್ಷ. ನಾನು ಎಂಟನೇ ತರಗತಿಯವರೆಗೆ ಓದಿದ್ದು, ನಂತರ ನಾನು ದುಡಿಯುತ್ತಿದ್ದೆ ಮತ್ತು ನನ್ನ ದುಡುಮೆ ಮೇಲೆ ನಮ್ಮ ಮನೆತನದ ನಡೆಯುತ್ತದೆ. ನಮ್ಮ ಮನೆಯಲ್ಲಿ ನಾನು, ನನ್ನ ತಮ್ಮ ಮತ್ತು ನನ್ನ ತಾಯಿ ಇರುತ್ತೇವೆ. ನನ್ನ ತಮ್ಮ ಮತುತ ತಾಯಿ ಸಹ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ನನಗೆ ಅಪಘಾತವಾದ ನಂತರ ನನ್ನ ತಾಯಿ ಬೇರೆಯವರ ಮನೆಗೆ ಮನೆಗೆಲಸ ಹೋಗುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ತಮ್ಮ ಇನ್ನೂ ಶಾಲೆಗೆ ಹೋಗುವ ವಿದ್ಯಾರ್ಥಿ. ನನ್ನ ತಮ್ಮ ಮತ್ತು ತಾಯಿ ಮನೆಯಲ್ಲಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 18 ಸಾವಿರ ರೂಪಾಯಿ ತಿಂಗಳ ಉತ್ಪನ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ 50 ಸಾವಿರ ರೂಪಾಯಿ ಆಸ್ಪತ್ರೆ ಖರ್ಚು ಆಗಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕಿಮ್ಸ ಆಸ್ಪತ್ರೆ ಸರಕಾರಿ ಆಸ್ಪತ್ರೆ ಇರುವ ಕಾರಣ ಅಲ್ಲಿ ವೈದ್ಯೋಪಚಾರ ಮತ್ತು ಊಟೋಪಚಾರ ಪುಕ್ಕಟೆಯಾಗಿ ಕೊಡುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದ ದಿನದಿಂದ ಲಾರಿಗೆ ಫರ್ಮಿಟ ಮತ್ತು ಫಿಟ್ಟನೇಸ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಚಾಲಕನು ವಿಮೆ ಷರತ್ತುಗಳನ್ನು ಉಲ್ಲಂಘನೆ ಮಾಡಿರುವ ಕಾರಣ 2ನೇ ಎದುರುದಾರ ವಿಮೆ ಕಂಪನಿಯವರು ಯಾವುದೇ ಪರಿಹಾರ ಹಣ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಅದರಂತೆ ಅಪಘಾತ ನಮ್ಮ ತಪ್ಪಿನಿಂದ ಆಗಿರುವ ಕಾರಣ 2ನೇ

ಎದುರುದಾರರು ಯಾವುದೇ ರೀತಿ ಪರಿಹಾರ ಹಣ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

***(ಗಾಯಾಳುವನ್ನು ವೀಲಚೇರನಲ್ಲಿ ಕರೆದುಕೊಂಡು ಬಂದಿದ್ದು, ಎರಡು ಕಾಲುಗಳ ಮೊಣಕಾಲಿನ ಕೆಳಭಾಗದಲ್ಲಿ ಗಾಯದ ಗುರುತುಗಳು ಕಂಡು ಬರುತ್ತಿದೆ, ಚರ್ಮ ಸುಲಿದಿದ್ದು ಸಹ ಕಂಡು ಬರುತ್ತದೆ, ಆದರಂತೆ ಬಲಗಾಲಿನ ಪಾದದಲ್ಲಿ ಉಪಕರಣಗಳನುನ ಅಳವಡಿಸಿ ಕರೆದುಕೊಂಡು ಬಂದಿದ್ದು ಇರುತ್ತದೆ)***

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.